# ಹಸಿರ ನಡುವಿನ ಹಾಲ್ನೊರೆ ಎಮ್ಮೆಶಿರ್ಲವಜ್ರ ಜಲಪಾತ

ಹಸಿರನ್ನೇ ಹೊದ್ದು ಮಲಗಿದಂತೆ ಕಾಣುವ ಯಲ್ಲಾಪುರ ತಾಲ್ಲೂಕು ಜನಾಂಗಿಕ ವೈವಿಧ್ಯ ಮತ್ತು ನೈಸರ್ಗಿಕ ವೈಶಿಷ್ಟ್ಯದ ಕಾರಣಕ್ಕೆ ಕುತೂಹಲವನ್ನು ಹುಟ್ಟಿಸುವ ಆಕರ್ಷಣೀಯ ತಾಣ. ಕರ್ನಾಟಕದ ಗಡಿಯಂಚಿನ ಈ ಪ್ರದೇಶ ದಟ್ಟ ಕಾನನದ ನಡುವೆ ದ್ವೀಪದಂತೆ ಗೋಚರಿಸುತ್ತದೆ. ಒಂದು ಕಡೆ ಸಾಗರದ ಸೆರಗು ಮತ್ತೊಂದೆಡೆ ಮಲೆಪರ್ವತದ ಪಲ್ಲಂಗಕ್ಕೆ ಹಸಿರ ಹೊದಿಕೆಯ ಕಾಡಿನ ನಡುವೆ ಅಲ್ಲಲ್ಲಿ ಜನವಸತಿ ಇರುವ ಅಪರೂಪದ 'ಕಾನೂರುಗಳು' ಅನೇಕ.



ನಿಸರ್ಗ ಸೊಬಗಿನ ವೈಭವವನ್ನು ಹೆಚ್ಚಿಸುವ ಜಲಪಾತಗಳು ಅಲ್ಲಲ್ಲಿ ಕಿವಿಗಡಚಿಕ್ಕೆ 'ತನ್ನ ಐಸಿರಿಯನ್ನು ಕಣ್ಣು ತುಂಬಿಕೊಳ್ಳಿ' ಎಂದು ಅವು ಭೋರ್ಗರೆಯುತ್ತವೆ. ಅಂತಹವುಗಳ ಸಾಲಿನಲ್ಲಿ ಭಯಾನಕ ಎಮ್ಮೆಶಿರ್ಲವಜ್ರ ಜಲಪಾತವೂ ಒಂದು.

ನಿಸರ್ಗದ ಅದ್ಭುತ ಸೃಷ್ಟಿಗಳಲ್ಲಿ ಪಶ್ಚಿಮ ಘಟ್ಟದ ಪರ್ವತ ಶ್ರೇಣಿಗಳು ಸೇರಿವೆ. ಉತ್ತರ ಕನ್ನಡದ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಬಾಗಿ ಬಳುಕುವ ಹಳ್ಳಕೊಳ್ಳಗಳು ಅಸಂಖ್ಯ. ಹಳ್ಳಿಗಳ ಕೃಷಿ ಬದುಕಿಗೆ ಆಧಾರವಾಗಿರುವ ಇದೇ ಹಳ್ಳಕೊಳ್ಳ ಹೊಳೆಗಳು ಕಾನನದಲ್ಲಿ ಜಲಪಾತಗಳಾಗಿ ಧುಮ್ಮಿಕ್ಕುವ ಮೂಲಕ ಸ್ವರ್ಗವನ್ನೇ ಧರೆಗಿಳಿಸಿದೆ.

ಅಂತವುಗಳಲ್ಲಿ ಅನೇಕ ಜಲಪಾತಗಳನ್ನು ಹೊಂದಿರುವ ಯಲ್ಲಾಪುರ ತಾಲ್ಲೂಕು ಪ್ರವಾಸಿಗರ ಆಕರ್ಷಣೀಯ ತಾಣವಾಗಿದೆ. ಇನ್ನೂ ಬೆಳಕಿಗೆ ಬಾರದೆ ಸರಿಯಾದ ರಸ್ತೆ ದಾರಿಗಳಿಲ್ಲದೆ ಹೊರ ಜಗತ್ತಿನ ಸಂಪರ್ಕ ಕಾಣದ ಸ್ಥಳೀಯರಿಗೆ ಮಾತ್ರ ಗೊತ್ತಿರುವಂತಹ ಅಪರೂಪದ ಜಲಧಾರೆ ಈ 'ಎಮ್ಮೆಶಿರ್ಲವಜ್ರ'.

ಯಲ್ಲಾಪುರ ತಾಲೂಕಿನ ಅಂಬಗಾಂವ್ ಗ್ರಾಮದ ಕಂಚಿಮನೆಯ ಕಾಡಿನಲ್ಲಿರುವ ಈ ಜಲಪಾತವು ಯಲ್ಲಾಪುರ ತಾಲ್ಲೂಕು ಕೇಂದ್ರದಿಂದ 32 ಕಿ.ಮೀ. ದೂರದಲ್ಲಿದ್ದು ಇಡಗುಂದಿ ವಜ್ರಳ್ಳಿ ಮಾರ್ಗವಾಗಿ ಸಾಗಬೇಕಾಗುತ್ತದೆ. ಸೂರ್ಯನ ಬಿಸಿಲು ನೆಲಕ್ಕೆ ತಾಗದ ದಟ್ಟ ಕಾನನದ ಹೆಮ್ಮರಗಳ ನಡುವೆ ಬೆತ್ತದ ಮುಳ್ಳುಗಳನ್ನು ನೇವರಿಸಿ ದಾರಿ ಹುಡುಕಿಕೊಂಡು ಹೊರಟವರಿಗೆ 200 ಅಡಿಯ ಪ್ರಪಾತದಲ್ಲಿ 150 ಅಡಿ ಆಳಕ್ಕೆ ಜಿಗಿಯುವ ಎಮ್ಮೆಶಿರ್ಲ ವಜ್ರದ ದರ್ಶನವಾದೀತು.

ಬೇಸಿಗೆಯಲ್ಲಿ ಬಸವಳಿಯುವ ಈ ಜಲಪಾತದ ನೀರು ಮಾರ್ಚ್ ಕೊನೆಯವರೆಗೆ ಮೈದುಂಬಿ ಧುಮ್ಮಿಕ್ಕುತ್ತದೆ. ಜಲಪಾತದ ಸುತ್ತಲೂ ಎತ್ತರದ ಕಲ್ಲು ಹಾಸಿಗೆಯಿದ್ದು ಹಸಿರು ಹುಲ್ಲಿನ ಹಚ್ಚಡ ಬೆಳೆದು ನಿಂತಿದೆ. ಅಪರೂಪದ ವನ್ಯಜೀವಿಗಳು ಜೊತೆಗೆ ಕಂಬಳಿಯಾಕಾರದ ಹೆಜ್ಜೇನು, ಪಕ್ಷಿಗಳು, ವಿವಿಧ ಬಗೆಯ ಕಾಡು ಹೂವುಗಳು ಈ ತಾಣದಲ್ಲಿ ಕಾಣಸಿಗುತ್ತವೆ.

ಮಲೆನಾಡಿನ ಘಟ್ಟದ ಇಳಿಜಾರಿನಲ್ಲಿ ಧುಮ್ಮಿಕ್ಕುವ ಎಮ್ಮೆಶಿರ್ಲ ವಜ್ರ ಜಲಪಾತವು ಪ್ರವಾಸಿಗರ ನಕ್ಷೆಯಲ್ಲಿ ಇನ್ನೂ ದಾಖಲಾಗಬೇಕಿದೆ. ಚಾರಣದ ಆಯಾಸವನ್ನು ನೀಗಿಸಿಕೊಂಡು ತುಸುಕಾಲ ನೆಮ್ಮದಿಯ ಸುಖ ಅನುಭವಿಸುವ ಈ ಪ್ರವಾಸಿ ತಾಣದ ಅಭಿವೃದ್ಧಿಯ ಬಗೆಗೆ ಸ್ಥಳೀಯರ ನೆರವಿನೊಂದಿಗೆ ಚಿಂತಿಸಬೇಕಾದ ಅನಿವಾರ್ಯತೆ ಇದೆ. ಅಜ್ಞಾತವಾದ ಹಾಗೂ ರುದ್ರರಮಣೀಯವಾದ ಈ ಜಲಪಾತದ ದರ್ಶನ ಸುಲಭಸಾಧ್ಯವಲ್ಲ. ಸ್ಥಳೀಯರ ಸಂಪರ್ಕದೊಂದಿಗೆ ಸಾಗಿದರಷ್ಟೇ ಜಲಪಾತದ ದರ್ಶನವಾದೀತು.

■ ದತ್ತಾತ್ರೇಯ ಭಟ್ಟ, ಕಣ್ಣಿಪಾಲ

SDP
AYURVEDA
ಎಸ್‌ಡಿಪಿ
ದಂತ ಚೂರ್ಣ
ನೈಸರ್ಗಿಕ ಆಯುರ್ವೇದ ದಂತಮಂಜನ
॥ ಪ್ರಾತರ್ಭುಕ್ತ್ವಾಚ ಮೃದ್ವಗ್ರಂ ಕಷಾಯ ಕಟು ತಿಕ್ತಕಂ॥ (ವಾಗ್ಭಟ)
ಚೊಗರು, ಖಾರ, ಕಹಿ ಇರುವ
ಗಿಡಮೂಲಿಕೆಗಳಿಂದ ಹಲ್ಲು ಉಜ್ಜಿದರೆ
ಅಲ್ಲಾಡುವ ಹಲ್ಲುಗಳು ಸ್ಥಿರವಾಗುವುದು.
ಒಸಡಿನ ರಕ್ತಸ್ರಾವ ನಿಲ್ಲುವುದು.
ಬಾಯಿವಾಸನೆ ನಿವಾರಿಸುವುದು.
ಹಲ್ಲು ಜುಂಗುಟ್ಟುವುದನ್ನು ತಡೆಯುವುದು.
ಆರೋಗ್ಯವಂತ ಹಲ್ಲುಗಳಿಗಾಗಿ
ಎಸ್‌ಡಿಪಿ ದಂತಚೂರ್ಣ ಉಪಯೋಗಿಸಿ




Proprietary Ayurvedic Medicine
ಎಸ್‌ಡಿಪಿ ರೆಮೆಡೀಸ್ & ರಿಸರ್ಚ್ ಸೆಂಟರ್
ಪರ್ಲಡ್ಕ, ಪುತ್ತೂರು, ದ.ಕ.
ಇಮೇಲ್: sdpayurveda@gmail.com
Customer Care No.: +91 99004 09184